# ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪುಟ್ಟಣ್ಣ ರವರು ಪ್ರಸ್ತಾಪಿಸಿರುವ ನಿಯಮ 330ರ ಅಡಿಯಲ್ಲಿ ನೀಡಿರುವ ಸೂಚನೆಗೆ ಉತ್ತರ

**ಪ್ರಶ್ನೆ:**

ಸರ್ಕಾರಿ ಪ್ರಾಥಮಿಕ ಹಾಗು ಪ್ರೌಢಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಮದ್ಯಾಹ್ನದ ಊಟ, ಮೊಟ್ಟೆ, ಹಾಲು ವಿತರಣೆ ಪಠ್ಯಪುಸ್ತಕ ಸಮವಸ್ತ್ರ ಇತ್ಯಾದಿಗಳನ್ನು ನೀಡಲಾಗುತ್ತಿದೆ. ಶಾಲೆಯಲ್ಲಿ ಶಿಕ್ಷಕರು ಪ್ರತಿನಿತ್ಯ ಪಾಠ ಮಾಡುವುದನ್ನು ಬಿಟ್ಟು ವಿದ್ಯಾರ್ಥಿಗಳಿಗೆ ಮದ್ಯಾಹ್ನದ ಊಟ ತಯಾರಿ ಮಾಡುವುದು, ಹಾಲು ತರುವುದು, ಮೊಟ್ಟೆಗಳನ್ನು ತರುವುದು ಈ ಕೆಲಸವನ್ನೇ ಮಾಡುತ್ತಿದ್ದಾರೆ. ಇತ್ತೀಚೆಗೆ ಅಜೀಂ ಪ್ರೇಮ್‌ಜಿ ಫೌಂಡೇಷನ್ ವತಿಯಿಂದ ಮಕ್ಕಳಿಗೆ ಮೊಟ್ಟೆಯನ್ನು ನೀಡುತ್ತಿದ್ದಾರೆ. ಮೊಟ್ಟೆಯನ್ನು ತಂದು ಮಕ್ಕಳಿಗೆ ನೀಡುವಲ್ಲಿ ಶಿಕ್ಷಕರಿಗೆ ತುಂಬಾ ತೊಂದರೆಯಾಗಿದೆ. ಮೊಟ್ಟೆ ವಿತರಣೆಯ ಲೆಕ್ಕವನ್ನು ಆನ್‌ಲೈನ್ ಮೂಲಕ ಪ್ರತಿನಿತ್ಯ ಅಪ್ ಲೋಡ್ ಮಾಡಬೇಕೆಂಬ ಷರತ್ತನ್ನು ವಿಧಿಸಲಾಗಿದೆ. ಶಿಕ್ಷಕರಿಗೆ ಆನ್‌ಲೈನ್ ಸಮಸ್ಯೆಯಿಂದ ಪ್ರತಿನಿತ್ಯ ತುಂಬಾ ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ. ಹೊಸದಾಗಿ ತಂದಿರುವ (ಎಲ್.ಬಿ.ಎ) ಪರೀಕ್ಷೆ, ಮೌಲ್ಯಮಾಪನ ಹಾಗು ದಾಖಲೀಕರಣ ಕೆಲಸಗಳನ್ನು ಮಾಡಲು ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ತಾಲ್ಲೂಕು ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಿ.ಆರ್.ಸಿ. ಸಿ.ಆರ್.ಪಿ ಇ.ಸಿ.ಓ ಗಳು ಇದ್ದರು ಮೊಟ್ಟೆ ವಿತರಣೆಯ ವಿಷಯವನ್ನು ಪರಿಶೀಲಿಸಲು ಖಾಸಗಿಯವರಿಗೆ ವಹಿಸಿದ್ದು ಪ್ರತಿನಿತ್ಯ ಶಾಲೆಗೆ ಬಂದು ಶಿಕ್ಷಕರಿಗೆ ವಿನಾ ಕಾರಣ ತುಂಬಾ ತೊಂದರೆ ಕೊಡುತ್ತಿದ್ದಾರೆ. ಆದ್ದರಿಂದ ಮಧ್ಯಾಹ್ನದ ಊಟ, ಮೊಟ್ಟೆ ವಿತರಣೆ, ಹಾಲು ವಿತರಣೆ ಪಠ್ಯಪುಸ್ತಕ ಸಮವಸ್ತ್ರ ನೀಡುವುದು ಎಲ್ಲವನ್ನು ಬೇರೆ ಯಾವುದಾದರು ಸಂಸ್ಥೆಗೆ ನೀಡಿ ಶಿಕ್ಷಕರನ್ನು ಎಲ್ಲಾ ಜವಾಬ್ದಾರಿಗಳಿಂದ ಮುಕ್ತಗೊಳಿಸಿ ಶಾಲೆಯಲ್ಲಿ ಪಾಠ ಮಾಡಲು ಅವಕಾಶ ಮಾಡಿಕೊಡಬೇಕೆಂಬ ವಿಷಯವನ್ನು ನಿಯಮ 330ರಲ್ಲಿ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಲ್ಲಿ ಪ್ರಸ್ತಾಪಿಸುತ್ತೇನೆ.

**ಉತ್ತರ:**

ರಾಜ್ಯ ಸರ್ಕಾರದ ಮಹಾತ್ವಾಕಾಂಕ್ಷಿ ಕಾರ್ಯಕ್ರಮವಾದ ಮಧ್ಯಾಹ್ನ ಉಪಹಾರ ಯೋಜನೆಯಡಿ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಪೌಷ್ಟಿಕತೆ ಮತ್ತು ರಕ್ತ ಹೀನತೆ ನಿವಾರಿಸಲು ವಾರದಲ್ಲಿ 6 ದಿನ ಮಧ್ಯಾಹ್ನ ಬಿಸಿಯೂಟದೊಂದಿಗೆ ಪೂರಕ ಪೌಷ್ಠಿಕ ಆಹಾರವಾದ ಮೊಟ್ಟೆ ಅಥವಾ ಬಾಳೆಹಣ್ಣು ವಿತರಿಸಲಾಗುತ್ತಿದೆ. ಈ ಕಾರ್ಯಕ್ರಮವು ಮಕ್ಕಳ ಸಮಗ್ರ ದೈಹಿಕ ಆರೋಗ್ಯದ ಬೆಳವಣಿಗೆಗೆ ಪೂರಕವಾಗಿದೆ.

ರಾಜ್ಯ ಸರ್ಕಾರದಿಂದ 2 ದಿನಗಳಿಗೆ ಸಂಬಂಧಿಸಿದ ಪೂರಕ ಪೌಷ್ಠಿಕ ಆಹಾರದ ವಿತರಣೆಯ ವೆಚ್ಚವನ್ನು ಭರಿಸಲಾಗುತ್ತಿದ್ದು, ಉಳಿದ 4 ದಿನಗಳ ವೆಚ್ಚವನ್ನು ಅಜೀಂ ಪ್ರೇಮ್‌ಜಿ ಫೌಂಡೇಷನ್, ಬೆಂಗಳೂರು ಈ ಸಂಸ್ಥೆಯಿಂದ ಭರಿಸಲಾಗುತ್ತಿದೆ.

ಪ್ರತಿ ವಿದ್ಯಾರ್ಥಿಗೆ ಪೂರಕ ಪೌಷ್ಠಿಕ ಆಹಾರ ವಿತರಣೆಗೆ ರೂ.6/-ಗಳ ಒಂದು ದಿನದ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ.

ಶಾಲೆಗಳಲ್ಲಿ ಬಿಸಿಯೂಟ ಸಿದ್ಧಪಡಿಸಲು ಪೂರಕ ಪೌಷ್ಠಿಕ ಆಹಾರ ವಿತರಿಸಲು ವಿದ್ಯಾರ್ಥಿಗಳ ಸಂಖ್ಯೆಗಳಿಗೆ ಅನುಗುಣವಾಗಿ ಅಡುಗೆ ಸಿಬ್ಬಂದಿಯವರನ್ನು ನೇಮಕ ಮಾಡಿಕೊಳ್ಳಲಾಗಿದೆ. ಈ ಕಾರ್ಯಕ್ರಮದ ಮೇಲುಸ್ತುವಾರಿಯನ್ನು ಮಾತ್ರ ಶಿಕ್ಷಕರು ನೋಡಿಕೊಳ್ಳುತ್ತಾರೆ.

ಮೊಟ್ಟೆಯ ದರ ಮಾರುಕಟ್ಟೆಯಲ್ಲಿ ನಿರ್ದಿಷ್ಟವಾಗಿ ನಿಗದಿಯಾಗಿರುವುದಿಲ್ಲ. ಮೊಟ್ಟೆಯ ಲಭ್ಯತೆಯ ಆಧಾರದಲ್ಲಿ ಮೇರೆಗೆ ಮೊಟ್ಟೆಯ ದರದಲ್ಲಿ ಏರಿಳಿಗೆಯಾಗುತ್ತದೆ. ಆದಕಾರಣ ರಾಜ್ಯ ಸರ್ಕಾರದಿಂದ ಪೂರಕ ಪೌಷ್ಠಿಕ ಆಹಾರಗಳಾದ ಮೊಟ್ಟೆ ಅಥವಾ ಬಾಳೆಹಣ್ಣು ವಿತರಿಸಲು ಪ್ರತಿ ವಿದ್ಯಾರ್ಥಿಗೆ ಒಂದು ದಿನಕ್ಕೆ ರೂ.6/-ಗಳ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದ್ದು, ಈ ಘಟಕ ವೆಚ್ಚದಲ್ಲಿ ಮೊಟ್ಟೆ ಖರೀದಿಸಲು ರೂ.5/-ಗಳನ್ನು ನಿಗದಿಪಡಿಸಲಾಗಿದೆ. ಸರ್ಕಾರದ ನಿಗದಿಪಡಿಸಿರುವ ಘಟಕ ವೆಚ್ಚವು ಸೂಕ್ತವಾಗಿದ್ದು, ಸಗಟು ದರದಲ್ಲಿ ಮೊಟ್ಟೆ ಖರೀದಿ ಮಾಡುತ್ತಿರುವುದರಿಂದ ಸರ್ಕಾರ ನೀಡುವ ಹಣದಲ್ಲಿ ಮೊಟ್ಟೆ ಖರೀದಿಸಲು ಸಾಧ್ಯವಾಗುತ್ತಿದೆ.

ಪೂರಕ ಪೌಷ್ಠಿಕ ಆಹಾರ ಖರೀದಿ ಪ್ರಕ್ರಿಯೆಯನ್ನು ಶಾಲಾ ಹಂತದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರು, ಶಾಲಾ ಮುಖ್ಯ ಶಿಕ್ಷಕರು ಹಾಗೂ ಇತರರನ್ನೊಳಗೊಂಡ ಖರೀದಿ ಸಮಿತಿಯಿಂದ ನಿರ್ವಹಿಸಲಾಗುತ್ತಿದೆ.

ಮಧ್ಯಾಹ್ನ ಉಪಹಾರ ಯೋಜನೆಯಡಿ ವಿದ್ಯಾರ್ಥಿಗಳಿಗೆ ವಿತರಿಸಲಾಗುತ್ತಿರುವ ಪೂರಕ ಪೌಷ್ಠಿಕ ಆಹಾರದ (ಮೊಟ್ಟೆ ಅಥವಾ ಬಾಳೆಹಣ್ಣು) ವಿವರಗಳನ್ನು ಶಾಲಾ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಶಾಲಾ ಹಂತದಲ್ಲಿ ನಮೂದಿಸಲು ಸಂಬಂಧಿಸಿದ ಶಾಲೆಗಳ ಮುಖ್ಯ ಶಿಕ್ಷಕರಿಗೆ ಅವಕಾಶ ಕಲ್ಪಿಸಲಾಗಿದೆ. ಈ ಪ್ರಕ್ರಿಯೆಯು ಅತ್ಯಂತ ಸರಳ ಪ್ರಕ್ರಿಯೆಯಾಗಿದ್ದು, ಶಾಲಾ ಮುಖ್ಯ ಶಿಕ್ಷಕರು, ವಿತರಿಸಲಾದ ಪೂರಕ ಪೌಷ್ಠಿಕ ಆಹಾರದ ವಿವರ, ಖರೀದಿಸಲಾದ ಪೂರಕ ಪೌಷ್ಠಿಕ ಆಹಾರ ವಿವರ ಮತ್ತು ಎರಡು/ ಮೂರು ತಿಂಗಳಿಗೊಮ್ಮೆ ಬ್ಯಾಂಕ್ ಬಡ್ಡಿ ವಿವರಗಳನ್ನು ಮಾತ್ರ ನಮೂದಿಸಬೇಕಾಗಿದೆ. ಶಾಲಾ ಮುಖ್ಯ ಶಿಕ್ಷಕರಿಗೆ ಇಲಾಖಾ ವೆಬ್‌ಸೈಟ್‌ನಲ್ಲಿ ಪೂರಕ ಪೌಷ್ಠಿಕ ಆಹಾರ ವಿತರಣೆಯ ಮಾಹಿತಿಗಳನ್ನು ನಮೂದಿಸುವ ಕುರಿತು ಈಗಾಗಲೇ ತರಬೇತಿಯನ್ನು ನೀಡಲಾಗಿದೆ. ಶಾಲಾ ಮುಖ್ಯ ಶಿಕ್ಷಕರು ಮೊಬೈಲ್ ಫೋನ್ ಮೂಲಕವೂ ಸಹ ಮಾಹಿತಿಗಳನ್ನು ಇಲಾಖೆ ವೆಬ್‌ಸೈಟ್‌ನಲ್ಲಿ ಇಂದೀಕರಿಸಬಹುದಾಗಿದೆ.

ರಾಜ್ಯದಲ್ಲಿ 2025-26ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಪಾಠ ಆಧಾರಿತ ಮೌಲ್ಯಾಂಕನವನ್ನು (Lesson Based Assessment) ಅಳವಡಿಸುವ ಸಂಬಂಧ ರಾಜ್ಯ ಪಠ್ಯಕ್ರಮದ ಶಾಲೆಗಳ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳ ಕಲಿಕೆಯನ್ನು ಸಾಧಿಸಲು ಹಾಗೂ ಪ್ರತಿ ಪಾಠದ ನಂತರ ಮಗುವಿನ ಕಲಿಕೆಯನ್ನು ದೃಢೀಕರಿಸಲು ಪಾಠ ಆಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿಯನ್ನು ಸಿದ್ಧಪಡಿಸಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ವೆಬ್‌ಸೈಟ್ ನಲ್ಲಿ ಅಳವಡಿಸಲಾಗಿದೆ. ಸದರಿ ಪ್ರಶ್ನೆಕೋಠಿಯನ್ನು ಕಲಿಕಾ ಪ್ರಕ್ರಿಯೆಯಿಂದ ಮೌಲ್ಯಾಂಕನ ಪ್ರಕ್ರಿಯೆಯವರೆಗೆ ಎಲ್ಲಾ ಹಂತದಲ್ಲೂ ನಿರಂತರವಾಗಿ ಬಳಸುವ ಸಂಬಂಧ ಹಾಗೂ ಅನುಷ್ಠಾನ, ಮೇಲ್ವಿಚಾರಣೆ ಹಾಗೂ ಅನುಪಾಲನೆ ಸಂಬಂಧ ಸುತ್ತೋಲೆ, You Tube Live, VC & webinar ಗಳ ಮೂಲಕ ಮಾರ್ಗದರ್ಶನ ನೀಡಲಾಗಿರುತ್ತದೆ.

ಈ ಹಿಂದೆಯೂ ಘಟಕ ಪರೀಕ್ಷೆಗಳನ್ನು ಮಾಡುತ್ತಿದ್ದು, ಇದಕ್ಕೆ ಬದಲಾಗಿ ಪಾಠ ಆಧಾರಿತ ಮೌಲ್ಯಾಂಕನವನ್ನು (LBA) ವ್ಯವಸ್ಥಿತವಾಗಿ ಅನುಷ್ಠಾನಿಸಲು ಹಾಗೂ ಅನುಪಾಲನೆ ಮಾಡಲು ಕ್ರಮವಹಿಸಲಾಗಿದೆ. ಇದು ನಿರಂತರ ಮೌಲ್ಯಮಾಪನಕ್ಕೆ (CCE) ಪೂರಕವಾಗಿದೆ.

1 ರಿಂದ 5ನೇ ತರಗತಿಗೆ 15 ಅಂಕಗಳಿಗೆ (10 ಲಿಖಿತ + 5 ಮೌಖಿಕ), 6 ರಿಂದ 10ನೇ ತರಗತಿಯವರೆಗೆ 20 ಅಂಕಗಳಿಗೆ LBA ಮಾಡಲು, ಭಾಷೆಗಳಲ್ಲಿ ಒಂದು ಪಾಠ ಮತ್ತು ಒಂದು ಪದ್ಯ ಸೇರಿಸಿ ಒಂದು LBA ಹಾಗೂ ಸಮಾಜ ವಿಜ್ಞಾನದಲ್ಲಿ 3 ಪಾಠಗಳಿಗೆ ಒಂದು LBA ಮಾಡಲು ತಿದ್ದುಪಡಿ ಸುತ್ತೋಲೆಯನ್ನು ನೀಡಲಾಗಿದೆ.

SATS ನಲ್ಲಿ ಅಂಕಗಳನ್ನು ದಾಖಲಿಸುವುದರಿಂದ ವಿವಿಧ ರೀತಿಯ ವಿಶ್ಲೇಷಣಾ ವರದಿಗಳನ್ನು ಪಡೆದು ಶಿಕ್ಷಕರು ಕಾರ್ಯ ತಂತ್ರಗಳನ್ನು ರೂಪಿಸಿ ಬೋಧನೆ ಮಾಡಲು ಅನುಕೂಲಕರವಾಗಿದೆ ಹಾಗೂ ಇದರಿಂದಾಗಿ ಭೌತಿಕ ದಾಖಲೆಗಳ ನಿರ್ವಹಣೆ ಕಡಿಮೆಯಾಗುತ್ತದೆ.

ಶಿಕ್ಷಕರಿಗೆ ತಂತ್ರಜ್ಞಾನ ಬಳಕೆ ಸಂಬಂಧ Induction & TALP ತರಬೇತಿ ನೀಡಲಾಗಿದ್ದು, ಶಿಕ್ಷಕರು ಅಂತರ್ಜಾಲವನ್ನು ಇಂದೀರಿಸುವ ಜ್ಞಾನ ಹೊಂದಿರುತ್ತಾರೆ.

LBA ಪ್ರಶ್ನೆಕೋಠಿಯಿಂದ ಶಿಕ್ಷಕರಿಗೆ ವಿವಿಧ ರೀತಿಯ ಪ್ರಶ್ನೆಗಳನ್ನು ರಚಿಸುವ ಕೌಶಲ ವೃದ್ಧಿಯಾಗುತ್ತದೆ. ಅಂತೆಯೇ ಎಲ್ಲಾ ಹಂತದ ಮಕ್ಕಳಿಗೂ LBA ಅಳವಡಿಸಲು ಸದರಿ ಪ್ರಶ್ನೆಕೋಠಿ ಪೂರಕವಾಗಿದೆ.

ತಾಲ್ಲೂಕು ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು, ಸಮೂಹ ಸಂಪನ್ಮೂಲ ವ್ಯಕ್ತಿಗಳು ಮತ್ತು ಶಿಕ್ಷಣ ಸಂಯೋಜಕರುಗಳಿಗೆ ಶಾಲೆಗಳಲ್ಲಿನ ಪೂರಕ ಆಹಾರ ವಿತರಣೆ ಮೇಲುಸ್ತುವಾರಿಯ ಜವಾಬ್ದಾರಿಯನ್ನು ನೀಡಲಾಗಿದ್ದು, ಖಾಸಗಿಯವರಿಗೆ ವಹಿಸಿರುವುದಿಲ್ಲ. ಅಜೀಂ ಪ್ರೇಮ್‌ಜಿ ಫೌಂಡೇಷನ್ ಸಂಸ್ಥೆಯ ವ್ಯಕ್ತಿಗಳು ಕೆಲವು ಶಾಲೆಗಳಿಗೆ ಮಾತ್ರ ಭೇಟಿ ನೀಡಿ ಪೂರಕ ಪೌಷ್ಠಿಕ ಆಹಾರ ವಿತರಣೆಯ ಕುರಿತು ಮಾಹಿತಿಯನ್ನು ಪಡೆಯುತ್ತಿದ್ದು, ಶಿಕ್ಷಕರಿಗೆ ಯಾವುದೇ ತೊಂದರೆಯಾಗಿರುವುದಿಲ್ಲ.

ಈ ಬಗ್ಗೆ ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಶಿಕ್ಷಕರ ಸಂಘದ ಪ್ರತಿ ನಿಧಿಗಳೊಂದಿಗೆ ಸಭೆ ನಡೆಸಿ ಶಿಕ್ಷಕರ ಸಮಸ್ಯೆ, ಮೊಟ್ಟೆ/ಬಾಳೆಹಣ್ಣು ವಿತರಣೆಗೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ.

ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಸಮವಸ್ತ್ರ ಮತ್ತು ಪಠ್ಯಪುಸ್ತಕಗಳನ್ನು ಇಲಾಖಾ ವತಿಯಿಂದಲೇ ಖರೀದಿಸಿ ಶಾಲೆಗಳಿಗೆ ಸರಬರಾಜು ಮಾಡಲಾಗುತ್ತದೆ. ವಿದ್ಯಾರ್ಥಿಗಳಿಗೆ ಸಮವಸ್ತ್ರ ಮತ್ತು ಪಠ್ಯಪುಸ್ತಕಗಳ ವಿತರಣೆಯನ್ನು ಮಾತ್ರ ಶಾಲಾ ಹಂತದಲ್ಲಿ ಕೈಗೊಳ್ಳಲಾಗುತ್ತದೆ.

ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ನೀಡಲಾಗುವ ಸೌಲಭ್ಯವನ್ನು ಒದಗಿಸುವುದು ಶಿಕ್ಷಕರ ಆಧ್ಯ ಕರ್ತವ್ಯವಾಗಿರುತ್ತದೆ. ಶಿಕ್ಷಕರನ್ನು ಈ ಜವಾಬ್ದಾರಿಯಿಂದ ಮುಕ್ತಗೊಳಿಸಿದರೆ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಸೌಲಭ್ಯಗಳು ದೊರೆಯದೇ ವಿದ್ಯಾರ್ಥಿಗಳು ಸೌಲಭ್ಯಗಳಿಂದ ವಂಚಿತರಾಗಿ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ತೊಂದರೆಯಾಗುತ್ತದೆ. ಆದಕಾರಣ ಮಧ್ಯಾಹ್ನದ ಬಿಸಿಯೂಟ ಮತ್ತು ಕ್ಷೀರಭಾಗ್ಯ ಕಾರ್ಯಕ್ರಮಗಳನ್ನು ಶಿಕ್ಷಕರ ಮೇಲುಸ್ತುವಾರಿಯಲ್ಲಿ ಮುಂದುವರೆಸುವುದು ಸೂಕ್ತವಾಗಿದೆ.

**ಇಪಿ 97 ಎಂಎಂಎಸ್ 2025**

**(ಎಸ್.ಮಧುಬಂಗಾರಪ್ಪ)**

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**